15.	ಗುಲ್ಬರ್ಗಾ ಜಿಲ್ಲೆಯ ಬಡಗಾ ಯಲ್ಲಾಲಿಂಗ ಪ್ರಭುದೇವರ ಶ್ರೀ ಕ್ಷೇತ್ರ ಮಠಕ್ಕೆ ರಥ ನಿರ್ಮಿಸಲು ಮರ ಮಂಜೂರು	ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಇವರ ಪತ್ರ ಸಂಖ್ಯೆ: ಎ9:ಬಿಎಲ್‌ಡಿ:552:94-95, ದಿನಾಂಕ 26-9-95ರಂತೆ ವರದಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಗುಲ್ಬರ್ಗಾ ಇವರಿಂದ ಕೇಳಲಾಗಿದೆ.
16.	ಹೂವಿನ ಹಡಗಲಿ ತಾಲ್ಲೂಕು ಮಠ ಗ್ರಾಮದ ಶ್ರೀ ಸಿದ್ಧವೀರೇಶ್ವರ ಸೇವಾ ಸಮಿತಿಗೆ ತೇರು ನಿರ್ಮಿಸಲು ಮರ ಮಂಜೂರು	ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಇವರ ಪತ್ರ ಸಂಖ್ಯೆ:ಎ6(ಎ) ಟಿಬಿಆರ್:ಸಿಆರ್:3:96-97 ದಿನಾಂಕ ಜುಲೈ 96ರಂತೆ ಪತ್ರ ಬರೆಯಲಾಗಿದೆ.

ವಿಷಯ:- ನಿವೃತ್ತಿ ಹೊಂದಿದ ಪ್ರಾಥಮಿಕ ಶಿಕ್ಷಕರಿಗೆ ಪಿಂಚಣಿ ಮಂಜೂರಾತಿಯಲ್ಲಿ ಆಗುತ್ತಿರುವ ವಿಳಂಬ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 156 (406)

ಶ್ರೀ ಯು.ಆರ್.ಸಭಾಪತಿ (ಉಡುಪಿ):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1990ರಿಂದ ನಿವೃತ್ತಿ ಹೊಂದಿದ ಪ್ರಾಥಮಿಕ ಶಿಕ್ಷಕರ ಸಂಖ್ಯೆ ಎಷ್ಟು?

ಆ) 1990ರ ಮೊದಲು ಹಾಗೂ ನಂತರ ನಿವೃತ್ತಿ ಹೊಂದಿದ ಎಷ್ಟು ಶಿಕ್ಷಕರ ನಿವೃತ್ತಿ ನಿವೃತ್ತಿ ವೇತನಗಳು (ಪಿಂಚಣಿ) ಮಂಜೂರಾತಿ ಆಗದೆ ಬಾಕಿ ಇರುವವರ ಸಂಖ್ಯೆ ಎಷ್ಟು?

ಇ) ಬಾಕಿ ಇರಿಸಿಕೊಂಡಿರುವ ಸದರಿ ಕಡತಗಳ ವಿಲೇವಾರಿಗೆ ಎಷ್ಟು ಸಮಯ ಬೇಕಾಗಬಹುದು.

ಈ) ನಿವೃತ್ತಿ ಹೊಂದಿದ ಶಿಕ್ಷಕರ ಪಿಂಚಣಿಯನ್ನು ಆಯಾ ಶಿಕ್ಷಕರು ನಿವೃತ್ತಿ ಹೊಂದಿದ ತಕ್ಷಣ (ಕನಿಷ್ಠ ಒಂದು ತಿಂಗಳೊಳಗೆ) ಕೊಡಲು ಸಾಧ್ಯವಿಲ್ಲವೇ?

ಶ್ರೀ ಹೆಚ್.ಸಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) 21,458.

ಆ) 1990ರ ಮೊದಲು ನಿವೃತ್ತಿ ಹೊಂದಿದ ಶಿಕ್ಷಕರ ಪ್ರಕರಣಗಳು ಯಾವುದೂ ಇಲ್ಲ, ನಂತರ ಪ್ರಕರಣಗಳು 24 ಬಾಕಿ ಇವೆ.

ಇ) 20 ಪ್ರಸ್ತಾವನೆಗಳು ಈಗಾಗಲೇ ಮಹಾಲೇಖಪಾಲಕರಿಗೆ ಕಳುಹಿಸಿಕೊಡಲಾಗಿದೆ. ಇವುಗಳು 3 ತಿಂಗಳಲ್ಲಿ ಇತ್ಯರ್ಥವಾಗುತ್ತದೆ. ಉಳಿದ ಪ್ರಕರಣಗಳು ಶಿಕ್ಷಕರುಗಳು ಅಗತ್ಯ ಮಾಹಿತಿ ಸಲ್ಲಿಸದಿರುವ ಕಾರಣ ಮತ್ತು ಕ್ಲಿಷ್ಟ ಸಮಸ್ಯೆಗಳು ಇದ್ದ ಪ್ರಕರಣಗಳಲ್ಲಿ ಹೆಚ್ಚಿನ ಸಮಯಾವಕಾಶ ಆಗುತ್ತದೆ.

ಈ) ಇದು ಮಹಾಲೇಖಪಾಲಕರ ವ್ಯಾಪ್ತಿಗೆ ಸೇರಿದ್ದಾಗಿದೆ. ಈಗಿರುವ ನಿಯಮದಂತೆ ನಿವೃತ್ತಿ ಹೊಂದಲು ಎರಡು ತಿಂಗಳ ಮೊದಲೆ ಸರಿಯಾದ ಪ್ರಸ್ತಾವನೆ ಸಲ್ಲಿಸಿದಲ್ಲಿ ಒಂದು ತಿಂಗಳೊಳಗೆ ಇತ್ಯರ್ಥಪಡಿಸಬಹುದಾಗಿದೆ. ಒಂದು ವೇಳೆ ಈ ಅವಧಿಯಲ್ಲಿ ಪ್ರಸ್ತಾವನೆಯನ್ನು ಮಹಾಲೇಖಪಾಲರಿಗೆ ಸಲ್ಲಿಸಲಾಗಿದಿದ್ದಲ್ಲಿ ತಾತ್ಕಾಲಿಕ ನಿವೃತ್ತಿ ವೇತನವನ್ನು ನೀಡಲು ಅವಕಾಶ ಮಾಡಿಕೊಡಲಾಗಿದೆ.

ವಿಷಯ:- ಮಂಗಳೂರು ಸಹ ನಿರ್ದೇಶಕರ ಕಛೇರಿಯ ಅಧೀಕ್ಷಕರುಗಳ ಮೇಲೆ ಇರತಕ್ಕ ಆಪಾದನೆಗಳ ಬಗ್ಗೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 157 (408)

ಶ್ರೀ ಯು.ಆರ್.ಸಭಾಪತಿ (ಉಡುಪಿ):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಗಳೂರು ಸಹ ನಿರ್ದೇಶಕರು ಕಛೇರಿ ಕಾಲೇಜು ಶಿಕ್ಷಣ ಇಲಾಖೆ, ಇಲ್ಲಿ ಅಧೀಕ್ಷಕರುಗಳ ಬಗ್ಗೆ ಆಪಾದನೆಗಳಿರುವುದು ನಿಜವೆ?

ಆ) ನಿಜವಾಗದಿದ್ದಲ್ಲಿ ವಿನಾಕಾರಣ ಗಲಭೆಗಳು ಧರಣಿಗಳು ನಡೆಯಲು ಕಾರಣಗಳೇನು?

ಇ) ಈ ಬಗ್ಗೆ ಸರ್ಕಾರಕ್ಕೆ ಅಸೋಷಿಯೇಷನ್ ಆಫ್ ಮಂಗಳೂರು ಯುನಿವರ್ಸಿಟಿ ಕಾಲೇಜು ಟೀಚರ್ಸ್ (ರಿ) ಇವರಿಂದ ದೂರುಗಳು ಬಂದಿಲ್ಲವೆ?

ಈ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? ಹಾಗಿದ್ದಲ್ಲಿ ಈ ತನಿಖೆಗೆ ಉನ್ನತಾಧಿಕಾರಿಯನ್ನು ನೇಮಕ ಮಾಡಲಾಗುವುದೇ ವಿವರ ನೀಡುವುದು.

ಶ್ರೀ ಬಿ.ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು):-

ಅ) ನಿಜ.

ಆ) ಮೇಲಿನ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಇ) ಬಂದಿವೆ.

ಈ) ಈ ಬಗ್ಗೆ ವಿವರವಾದ ತನಿಖೆ ನಡೆಸಲು ಕಾಲೇಜು ಶಿಕ್ಷಣ ನಿರ್ದೇಶನಾಲಯದ ಹೆಚ್ಚುವರಿ ನಿರ್ದೇಶಕರಾದ ಪ್ರೋ ಬಿ.ಆರ್.ರಾಮಚಂದ್ರಗೌಡ, ಇವರನ್ನು ತನಿಖಾಧಿಕಾರಿಯಾಗಿ ನೇಮಿಸಿ ತನಿಖಾವರದಿಯನ್ನು ನೀಡಲು